ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ 23.03.2022 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು ಃ

ಮುಂದುವರೆದ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದ

2. (ಸೀಲ್ ಮಾಡಿದ ಕವರನ್ನು ನ್ಯಾ ದ ಅನುಮತಿ ಮೇರೆಗೆ ತೆರೆಯಲಾಯಿತು) ನನಗೆ ತೋರಿಸಿದ ದಾಖಲೆಗಳನ್ನು ನೋಡಿದ್ದೇನೆ. ಸದರಿ ದಾಖಲೆಗಳನ್ನು ನಿ.ಪಿ.-77 ರಿಂದ 81 ರಂತೆ ಗುರುತಿಸಲಾಯಿತು. ಸದರಿ ದಾಖಲೆಗಳಲ್ಲಿ 2 ನೇ ಆರೋಪಿ ಸಹಿ ಮಾಡಿದ್ದಾರೆ. ನನ್ನ ಸಹಿಗಳನ್ನು ನಿ.ಪಿ.-77(ಎ) ರಿಂದ 81(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗಳನ್ನು ವಶಕ್ಕೆ ಪಡೆದ ಬಗ್ಗೆ ಪೋಲೀಸ್ ಠಾಣೆಯಲ್ಲಿ ನಿ.ಪಿ.-82 ರಂತೆ ಅಮಾನತ್ತು ಮಹಜರ್ ಮಾಡಿದ್ದು ನಾನು ನಿ.ಪಿ.-82(ಎ) ರಂತೆ ಸಹಿ ಮಾಡಿದ್ದೇನೆ. ನಿ.ಪಿ.-77 ರಿಂದ 81 ರಲ್ಲಿ ಮಂಜುನಾಥ ಸನ್ ಆಫ್ ನಾರಾಯಣ ಎಂದು ನಮೂದು ಮಾಡಿದ್ದಾರೆ. ಅದೇ ದಿನ ಪೋಲೀಸ್ ಠಾಣೆಯಿಂದ 6 ನೇ ಮುಖ್ಯ ರಸ್ತೆ ವಿ.ವಿ.ಮೊಹಲ್ಲಾ ಕ್ಕೆ ಕರೆದುಕೊಂಡು ಹೋಗಿದ್ದಾರೆ. ನಾನು, 5 ಜನ ಆರೋಪಿಗಳು ಮತ್ತು ಪೋಲೀಸರು ಸಮೇತ ಘಟನೆ ನಡೆದ ಸ್ಥಳಕ್ಕೆ ಹೋಗಿದ್ದೇವೆ. 5 ಜನ ಆರೋಪಿಗಳು ಮುಂದೆ ನಡೆದು ಧಾತ್ರಿ ಬುಟಿಕ್ ಬಳಿ ಘಟನೆ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಪೋಲೀಸರು ಸ್ಥಳದಲ್ಲಿ ಪೋಟೋಗಳನ್ನು ತೆಗೆದು ಮಹಜರ್ ಬರೆದಿದ್ದಾರೆ. ಮೂರು ಪೋಟೋಗಳನ್ನು ಕ್ರಮವಾಗಿ ನಿಪಿ.-83, 84, 85 ರಂತೆ ಗುರುತಿಸಲಾಯಿತು. (ಪೋಟೊಗಳನ್ನು ಆರೋಪಿಗಳ ಪರ ವಕೀಲರ ಆಕ್ಷೇಪಣೆಗೆ ಒಳಪಟ್ಟು ಗುರುತಿಸಲಾಯಿತು). ಎರಡು ಪೋಟೋಗಳಲ್ಲಿ ನಾನು ಕಂಡು ಬರುತ್ತೇನೆ. ಮಹಜರ್ ಅನ್ನು ನಿ.ಪಿ.-86 ಮತ್ತು ನನ್ನ ಸಹಿಯನ್ನು ನಿ.ಪಿ.-86(ಎ) ಎಂದು ಗುರುತಿಸಲಾಯಿತು. ಮಹಜರ್ ಅನ್ನು ಬೆಳಗ್ಗೆ 11.40 ರಿಂದ 12.50 ರ ತನಕ ಮಾಡಿದ್ದಾರೆ. ಮತ್ತು ನನ್ನ ಜೊತೆ ಚಾ.ಸಾ-36 ಇದ್ದರು.

3. ನಂತರ ನಾನು, 5 ಜನ ಆರೋಪಿಗಳು ಮತ್ತು ಪೋಲೀಸರು ಅದೇ ರಸ್ತೆಯಲ್ಲಿ ಇದ್ದ ಕಾಸ್ಮೋಸ್ ಕೆಫೆಯ ಹತ್ತಿರ ಹೋಗಿ ಕೆಫೆ ಮಾನೆಜರ್ ಅವರನ್ನು ಭೇಟಿ ಮಾಡಿ ಸಿ.ಸಿ ಟಿವಿ ಪ್ಲೇ ಮಾಡುವಂತೆ ಹೇಳಿ ನೊಡಲಾಗಿ ದಿಃ 23.12.2016 ರಂದು ಬೆಳಗ್ಗೆ 9.30 ರಿಂದ 10.30 ರ ವೇಳೆ ಸಿಲ್ವರ್ ಬಣ್ಣದ ಕಾರ್, ಆರೋಪಿಗಳು ಇದ್ದ ಬಗ್ಗೆ ಕಂಡುಬಂದಿದೆ. ಸ್ಯಾಂಟ್ರೋ ಕಾರು ಇದ್ದು ನಂಬರ್ ಪ್ಲೇಟ್ ಕಂಡುಬಂದಿಲ್ಲ. ಕೆಫೆ ಯಿಂದ ಡಿವಿಆರ್ ಅನ್ನು ಮಹಜರ್ ಮೂಲಕ ವಶಕ್ಕೆ ಪಡೆದು ನನ್ನ ಸಹಿ ಪಡೆದಿದ್ದಾರೆ. ಮಹಜರ್ ಅನ್ನು ನಿ.ಪಿ.-87 ಮತ್ತು ಸಹಿಯನ್ನು ನಿ.ಪಿ.-87(ಎ) ಎಂದು ಗುರುತಿಸಲಾಯಿತು. (ಸೀಲ್ ಮಾಡಿದ ಪ್ಯಾಕೆಟ್ ಅನ್ನು ನ್ಯಾದ ಅನುಮತಿ ಮೇರೆಗೆ ತೆರೆಯಲಾಯಿತು) ಕವರ್ ಮೇಲೆ ನಾನು ಸಹಿ ಮಾಡಿದ ಚೀಟಿಯನ್ನು ಅಂಟಿಸಿದ್ದು ಬಟ್ಟೆಯ ಕವರನ್ನು ಎಂ.ಒ.-21 ನನ್ನ ಸಹಿಯನ್ನು ಎಂ.ಒ.-21(ಎ) ಎಂದು ಹಾಗೂ ಡಿವಿಆರ್ ಅನ್ನು ಎಂ.ಒ.-22 ಗುರುತಿಸಲಾಯಿತು. ಮಹಜರ್ ಅನ್ನು ಮಧ್ಯಾಹ್ನ 1.00 ರಿಂದ 2.00 ರ ವರೆಗೆ ಬರೆದಿದ್ದು ನಾನು ಮತ್ತು ಚಾ.ಸಾ.36 ಸಹಿ ಮಾಡಿದ್ದೇವೆ. ಸಿ.ಸಿ ಟಿವಿ ಪ್ಲೇ ಮಾಡಿದಾಗ ಕಂಡು ಬಂದ ಕಾರು ಮತ್ತು ಆರೋಪಿಗಳು ಇರುವ ಪೋಟೋವನ್ನು ಈಗಾಗಲೇ ನಿ.ಪಿ.-65 ಎಂದು ಗುರುತಿಸಲಾಗಿದೆ.

4. ನಂತರ 2 ನೇ ಆರೋಪಿ ವಿಧ್ಯಾಭ್ಯಾಸ ಮಾಡಿದ ಮರಿಮಲ್ಲಪ್ಪ ಶಾಲೆಯ ಬಳಿ ಕರೆದುಕೊಂಡು ಹೋಗಿದ್ದರು. ಪ್ರಿನ್ಸಿಪಾಲ್ ಅವರನ್ನು ಭೇಟಿಮಾಡಿ ವಿಚಾರಿಸಲಾಗಿ 2 ನೇ ಆರೋಪಿ ಜೆ.ಓ.ಸಿ ವಿಧ್ಯಾಭ್ಯಾಸ ಮಾಡಿದ ಬಗ್ಗೆ ಅರ್ಜಿಯನ್ನು ಹಾಜರು ಮಾಡಿದ್ದು ಅದನ್ನು ಪೋಲೀಸರು ವಶಕ್ಕೆ ಪಡೆದಿದ್ದು ಅರ್ಜಿಯನ್ನು ನಿ.ಪಿ.-88 ರಂತೆ ಗುರುತಿಸಲಾಯಿತು. ನಿ.ಪಿ.-88 ಅನ್ನು ನಿ.ಪಿ.-89 ಮಹಜರ್ ನಂತೆ ವಶಕ್ಕೆ ಪಡೆದಿದ್ದು ನಾನು ಮತ್ತು ಚಾ.ಸಾ-36 ಸಹಿ ಮಾಡಿದ್ದೇವೆ ನನ್ನ ಸಹಿಯನ್ನು ನಿ.ಪಿ.-89(ಎ) ರಂತೆ ಗುರುತಿಸಲಾಯಿತು. ನಿ.ಪಿ.-89 ಮಹಜರ್ ಅನ್ನು ಸುಮಾರು 3.00 ರಿಂದ 4.00 ಗಂಟೆ ತನಕ ಮಾಡಿದ್ದಾರೆ. ನಂತರ ಪೋಲೀಸ್ ಠಾಣೆಗೆ ವಾಪಸ್ಸು ಬಂದು ನನ್ನ ಹೇಳಿಕೆ ಪಡೆದಿದ್ದಾರೆ. ನ್ಯಾ ದಲ್ಲಿ ಹಾಜರು ಇರುವ 2 ನೇ ಆರೋಪಿ ಶ್ರೀ. ಸಂಜು ಅವರನ್ನು ನೋಡಿ ಗುರುತಿಸಿದ್ದೇನೆ. ಘಟನೆ ನಡೆದು 6 ವರ್ಷ ಆದ ಕಾರಣ ಉಳಿದ 4 ಆರೋಪಿಗಳನ್ನು ಸರಿಯಾಗಿ ಗುರುತಿಸಲು ಆಗುವುದಿಲ್ಲ. (1 ನೇ ಆರೋಪಿ ಜೆ.ಸಿ ಯಲ್ಲಿ ಇದ್ದಾರೆ). 4 ನೇ ಆರೋಪಿ ಗೈರು ಹಾಜರು ಇದ್ದಾರೆ.

ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.

ಪಾಟೀ ಸವಾಲು ಸರಕಾರಿ ಅಭಿಯೋಜಕರಿಂದ :

5. 3 ಮತ್ತು 5 ನೇ ಆರೋಪಿಗಳು ನ್ಯಾದಲ್ಲಿ ಹಾಜರು ಇದ್ದು ನಾನು ಉದ್ದೇಶ ಪೂರ್ವಕ ವಾಗಿ ಅವರನ್ನು ಗುರುತಿಸಲು ಆಗುವುದಿಲ್ಲ ಎಂದು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳನ್ನು ಗುರುತಿಸುವ ಬಗ್ಗೆ ನಾನು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿ.

ಪಾಟೀ ಸವಾಲು 1 ಮತ್ತು 2 ನೇ ಆರೋಪಿತರ ವಕೀಲರಾದ ಶ್ರೀ ವಿ.ಎನ್.ಬಿ ರವರಿಂದಃ

6. ನಾನು ಕೆಲಸ ಮಾಡುವ ಅಂಚೆ ಕಛೇರಿ ವಿ.ವಿ.ಪುರಂ ಪೋಲೀಸ್ ಠಾಣೆಯಿಂದ *1* ಕಿ.ಮೀ ವ್ಯಾಪ್ತಿಯ ಒಳಗೆ ಇದೆ. ಸದರಿ ಅಂಚೆ ಕಛೇರಿ ಯಲ್ಲಿ *3* ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ವಿ.ವಿ.ಮೊಹಲ್ಲಾ ಎರಿಯಾದ ಬಗ್ಗೆ ಮಾಹಿತಿ ಇದೆ ಎಂದರೆ ಸರಿ. ದಿಃ ***27.12.2016*** ರಂದು ಪೋಲೀಸ್ ಅಧಿಕಾರಿ ಅಂಚೆ ಇಲಾಖೆ ಹಿರಿಯ ಅಧೀಕ್ಷಕರಿಗೆ ಇಬ್ಬರು ಸಿಬ್ಬಂಧಿಗಳನ್ನು ಕಳುಹಿಸುವಂತೆ ಮನವಿ ಪತ್ರ ಕೊಟ್ಟ ಬಗ್ಗೆ ನನಗೆ ದಿಃ ***28.12.2016*** ರಂದು ತಿಳಿದಿದೆ. ದಿಃ ***28.12.2016*** ರಂದು ಬೆಳಗ್ಗೆ ನಾನು ನನ್ನ ಕಛೇರಿಗೆ ಹೋಗಿಲ್ಲ ಎಂದರೆ ಸರಿ. ಸಾಕ್ಷಿದಾರರು ತಾನು ನೇರವಾಗಿ ಪೋಲೀಸ್ ಠಾಣೆಗೆ ಹೋಗಿರುವುದಾಗಿ ಸ್ವತಾಹ ನುಡಿಯುತ್ತಾರೆ. ದಿಃ***27.12.2016*** ರಂದು ಸಂಜೆ ವೇಳೆ ಅಂಚೆ ಇಲಾಖೆ ಹಿರಿಯ ಅಧೀಕ್ಷಕರು ನನಗೆ ಫೋನ್ ಮಾಡಿ ಕಛೇರಿಗೆ ಕರೆಸಿದ್ದರು. ಖಚಿತವಾದ ಸಮಯ ಹೇಳಲು ಬರುವುದಿಲ್ಲ. ನಾನು ಮತ್ತು ಚಾ.ಸಾ-*36* ಕೇಂದ್ರ ಸರ್ಕಾರದ ಆಧೀನ ಕಛೇರಿ ಸಿಬ್ಬಂಧಿಗಳು ಎಂದರೆ ಸರಿ. ದಿಃ ***28.12.2016*** ರಂದು ನಾನು ಪೋಲೀಸ್ ಠಾಣೆಗೆ ಹೋಗುವ ಬಗ್ಗೆ ಅಂಚೆ ಇಲಾಖೆ ಹಿರಿಯ ಅಧೀಕ್ಷಕರು ನನಗೆ ಮತ್ತು ಚಾ.ಸಾ-*36* ಅವರಿಗೆ ಮೌಖಿಖ ವಾಗಿ ತಿಳಿಸಿದ್ದರು.

ನನಗೆ ಮತ್ತು ಚಾ.ಸಾ-*36* ಅವರಿಗೆ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡುವ ಪದ್ಧತಿ ಇಲ್ಲ. ದಿಃ ***28.12.2016*** ರಂದು ಕರ್ತವ್ಯದ ಮೇಲೆ ಪೋಲೀಸ್ ಠಾಣೆಗೆ ಹೋಗಿದ್ದೇವೆ. ದಿಃ ***09.12.2021*** ಮತ್ತು ಇಂದು ದಿಃ ***23.03.2022*** ರಂದು ಕರ್ತವ್ಯದ ಮೇಲೆ ನ್ಯಾಕ್ಕೆ ಸಾಕ್ಷಿ ಹೇಳಲು ಬಂದಿದ್ದೇನೆ. ದಿಃ ***28.12.2016*** ರ ದಾಖಲಾತಿಗಳಲ್ಲಿ ನಮೂದು ಮಾಡಿದಂತೆ ಸಾಕ್ಷಿ ಹೇಳದೆ ಇದ್ದರೆ ನನ್ನ ವಿರುದ್ಧ ಇಲಾಖಾ ವಿಚಾರಣೆ ಮಾಡುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ನಾನು ಇಲಾಖಾ ವಿಚಾರಣೆಗೆ ಹೆದರಿಕೊಂಡು ದಾಖಲೆಗಳ ಬಗ್ಗೆ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

*7.* ನಾನು ಪೋಲೀಸ್ ಠಾಣೆಗೆ ಹೋದಾಗ ತನಿಖಾಧಿಕಾರಿ ಅವರು *2* ನೇ ಆರೋಪಿಯ ಹಸ್ತಾಕ್ಷರಗಳನ್ನು ಪಡೆದಿದ್ದು ಆಗ ಪೋಟೋಗಳನ್ನು ಪಡೆದಿಲ್ಲ. ಪೋಲೀಸ್ ಠಾಣೆಯಲ್ಲಿ ಬೇರೆ ಪಂಚರುಗಳನ್ನು ಕರೆಸಿಲ್ಲ. ನಿ.ಪಿ-*77* ರಂತೆ *2* ನೇ ಅರೋಪಿ ತನ್ನ ಅಕ್ಷರದಲ್ಲಿ ಬರೆದಿಲ್ಲ ಮತ್ತು ಸದರಿ ದಾಖಲೆಯನ್ನು ತನಿಖಾಧಿಕಾರಿ ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. ವಿ.ವಿ.ಪುರಂ ಪೋಲೀಸ್ ಠಾಣೆ *6* ಅಡ್ಡ ರಸ್ತೆಗೆ ಹಿಂಬಾಗ ಬರುತ್ತದೆ ಎಂದರೆ ಸರಿಯಲ್ಲ. ಅಂಚೆ ಕಛೇರಿ ಮುಂಬಾಗ ಲಾಯಲ್ ವರ್ಲ್ಡ್ ಇದೆ. ಲಾಯಲ್ ವರ್ಲ್ಡ್ ಇಂದ ಪೋಲೀಸ್ ಠಾಣೆ ಕಾಣಬಹುದು. ಲಾಯಲ್ ವರ್ಲ್ಡ್ ಇಂದ ದೇವಸ್ಥಾನ ಕಡೆಗೆ ಡಬಲ್ ರೋಡ್ ಇದೆ ಎಂದರೆ ಸರಿ. ಲಾಯಲ್ ವರ್ಲ್ಡ್ ಎದುರಿಗೆ *6* ನೇ ಅಡ್ಡ ರಸ್ತೆ ಇದೆ ಎಂದರೆ ಸರಿ. ಲಾಯಲ್ ವರ್ಲ್ಡ್ ಎದುರು ನಿಂತು ನೋಡಿದಾಗ *6* ನೇ ಅಡ್ಡರಸ್ತೆ ಯಲ್ಲಿ ಸುಮರು ***200-300*** ಮೀ ದೂರ ಕಾಣುತ್ತದೆ ಎಂದರೆ ಸರಿ. ಘಟನೆ ಆದ ಸ್ಥಳ ಪೋಲೀಸ್ ಠಾಣೆಯಿಂದ *200* ಮೀ ವ್ಯಾಪ್ತಿಯ ಒಳಗೆ ಇದೆ. ಲಾಯಲ್ ವರ್ಲ್ಡ್ ಕಟ್ಟಡಕ್ಕೆ ಸಾಕಷ್ಟು ಸಿ.ಸಿ ಟಿವಿ ಕ್ಯಾಮಾರಗಳು ಇವೆ ಎಂದು ಗೊತ್ತಿಲ್ಲ.

***8.*** ನಾನು ಇದ್ದ ಪೋಲೀಸ್ ಜೇಪ್ ನಲ್ಲಿ ಚಾ.ಸಾ-*36,* ಪಿ.ಐ ಮತ್ತು ಜೀಪ್ ಚಾಲಕ ಇದ್ದರು ಮತ್ತೊಂದು ಜೀಪ್‌ನಲ್ಲಿ ಆರೋಪಿಗಳು ಇದ್ದರು ಹಾಗೂ ಇಬ್ಬರು ಪೊಲೀಸರು ಇದ್ದಿರಬಹುದು. ***5.00*** ನಿಮಿಷ ಅವಧಿಯ ಒಳಗೆ ಪೋಲೀಸ್ ಠಾಣೆಯಿಂದ ಘಟನೆ ಸ್ಥಳಕ್ಕೆ ಮುಟ್ಟಿದ್ದೇವೆ. *5* ಜನ ಆರೋಪಿಗಳು ಪೋಲೀಸರ ವಶದಲ್ಲಿ ಇದ್ದರು ಎಂದರೆ ಸರಿ. ಆರೋಪಿಗಳು ಇದ್ದ ಜೇಪು ಮುಂದೆ ಹೋಗಿದ್ದು ಅದರ ಹಿಂದೆ ನಾವು ಇದ್ದ ಜೇಪು ಹೋಗಿದೆ. ಘಟನೆ ಸ್ಥಳಕ್ಕೆ ಜೇಪುಗಳ ಹೋಗುವ ಮೊದಲು ಸ್ಥಳದಲ್ಲಿ ಬೇರೆ ಪೋಲೀಸರು ಇರಲಿಲ್ಲ. ಘಟನೆ ಸ್ಥಳ ಸುತ್ತ ಮುತ್ತ ವಾಸದ ಮನೆಗಳು ಮತ್ತು ವ್ಯಾಪಾರ ಮಳಿಗೆಗಳು ಇದೆ ಎಂದರೆ ಸರಿ. ನನ್ನ ಮತ್ತು ಚಾ.ಸಾ-*36* ಹೊರತಾಗಿ ಅಕ್ಕಪಕ್ಕದ ವ್ಯಕ್ತಿಗಳನ್ನು ಪಂಚರಾಗಿ ಕರೆದಿಲ್ಲ. ನಿ.ಪಿ-*86* ಅನ್ನು ಸ್ಥಳದಲ್ಲಿ ಮಾಡಿಲ್ಲ ಮತ್ತು ಪೋಲೀಸ್ ಠಾಣೆಯಲ್ಲಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

*9.* ಅದೇ *2* ಜೀಪುಗಳಲ್ಲಿ ಕಾಸ್ಮೊಸ್ ಕೆಫೆಗೆ ಹೋಗಿದ್ದೇವೆ. ಘಟನೆ ಸ್ಥಳದಿಂದ ಕಾಸ್ಮೊಸ್ ಕೆಫೆ *50* ಮೀ ವ್ಯಾಪ್ತಿಯ ಒಳಗೆ ಇದೆ. ಘಟನೆ ಸ್ಥಳದಿಂದ ಕಾಸ್ಮೊಸ್ ಕೆಫೆ ಯಾವ ದಿಕ್ಕಿಗೆ ಇದೆ ಎಂದು ಹೇಳಲು ಬರುವುದಿಲ್ಲ. ಲಾಯಲ್ ವರ್ಲ್ಡ್ ಕಡೆಯಿಂದ ಘಟನೆ ಸ್ಥಳ ದಾಟಿ ಮುಂದೆ ಹೋಗಬೇಕು. ಘಟನೆ ಸ್ಥಳದ ವಾಸದ ಮನೆಯ ವ್ಯಕ್ತಿಗಳು ವಾಹನಗಳನ್ನು ತಮ್ಮ ತಮ್ಮ ಮನೆಯ ಮುಂದೆ ನಿಲ್ಲಿಸಿ ಕೊಂಡಿದ್ದರು ಎಂದು ಗೊತ್ತಿಲ್ಲ. ಕಾಸ್ಮೊಸ್ ಕೆಫೆಗೆ ಗ್ರಾಹಕರು ಬರುತ್ತಿದ್ದರು ಎಂದು ಗೊತ್ತಿಲ್ಲ. ಕಾಸ್ಮೊಸ್ ಕೆಫೆಗೆ ಪ್ರತ್ಯೇಕ ಪಾರ್ಕಿಂಗ್ ಇರುವ ಬಗ್ಗೆ ಗೊತ್ತಿಲ್ಲ . ಕಾಸ್ಮೊಸ್ ಕೆಫೆಗೆ ಬರುವ ಗ್ರಾಹಕರು ವಾಹನಗಳನ್ನು ಕೆಫೆಯ ಮುಂದೆ ನಿಲ್ಲಿಸುತ್ತಾರೆ ಎಂದು ಗೊತ್ತಿಲ್ಲ. *6* ನೇ ಅಡ್ಡ ರಸ್ತೆಯಲ್ಲಿ ಸಾರ್ವಜನಿಕ ವಾಹನಗಳು ಓಡಾಡಬಹುದು.

*10.* ಸಿ.ಸಿ. ಟಿವಿ ಯಲ್ಲಿ ನೋಡಿದ ವ್ಯಕ್ತಿಗಳು ಹಾಕಿದ ಬಟ್ಟೆಯ ಬಣ್ಣದ ಬಗ್ಗೆ ಹೇಳಲು ಬರುವುದಿಲ್ಲ. ಸಿ.ಸಿ. ಟಿವಿ ಯನ್ನು ಪ್ಲೇ ಮಾಡಿದ ವ್ಯಕ್ತಿಯ ಹೆಸರು ಹೇಳಲು ಬರುವುದಿಲ್ಲ. ಡಿವಿಆರ್ ಕಂಪನಿಯ ಹೆಸರನ್ನು ಮಹಜರ್ ನಲ್ಲಿ ನಮೂದು ಮಾಡಿರಬಹುದು ನನಗೆ ಹೇಳಲು ಬರುವುದಿಲ್ಲ. ಡಿವಿಆರ್ ಅನ್ನು ವಶಕ್ಕೆ ಪಡೆದ ಬಗ್ಗೆ ಸ್ವೀಕೃತಿಯನ್ನು ನೀಡಿದ ಬಗ್ಗೆ ಮಾಹಿತಿ ಇಲ್ಲ. ನಿ.ಪಿ-*87* ಮಹಜರ್ ಗೆ ನಾನು ಮತ್ತು ಚಾ.ಸಾ-*36* ಸಹಿ ಮಾಡಿದ ಹೊರತಾಗಿ ಬೇರೆ ವ್ಯಕ್ತಿಗಳು ಸಹಿ ಮಾಡಿದ ಬಗ್ಗೆ ಮಾಹಿತಿ ಇಲ್ಲ. ನಿ.ಪಿ-*87* ಮಹಜರ್ ಅನ್ನು ಕೆಫೆ ಯಲ್ಲಿ ಮಾಡಿಲ್ಲ ಮತ್ತು ಅದೇ ಕಾರಣ ಕೆಫೆಯ ವ್ಯಕ್ತಿಗಳ ಸಹಿ ಪಡೆದಿಲ್ಲ ಹಾಗೂ ಪೋಲೀಸ್ ಠಾಣೆಯಲ್ಲಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಕೆಫೆಯಿಂದ ವಾಪಸ್ಸು ಪೊಲೀಸ್ ಠಾಣೆಗೆ ಹೋಗಿದ್ದೇವೆ.

*11. 2* ನೇ ಆರೋಪಿ, ನಾನು,ಚಾ.ಸಾ-*36* ಮತ್ತು ಪೋಲೀಸ್ ಅಧಿಕಾರಿಗಳ ಸಮೇತ ಮರಿಮಲ್ಲಪ್ಪ ಕಾಲೇಜಿಗೆ ಹೋಗಿದ್ದೇವೆ. ಮರಿಮಲ್ಲಪ್ಪ ಕಾಲೇಜಿನಲ್ಲಿ ಸಂಜೆ *3.00* ರಿಂದ *4.00* ರ ತನಕ ನಿ.ಪಿ-*89* ಮಹಜರ್ ಅನ್ನು ಮಾಡಿದ್ದಾರೆ. ನಿ.ಪಿ-*88* ರಲ್ಲಿ ನಾನು ಸಹಿ ಮಾಡಿಲ್ಲ. *2* ನೇ ಆರೋಪಿ ನಿ.ಪಿ-*88* ಅನ್ನು ಕಾಲೇಜಿಗೆ ಕೊಟ್ಟಿದ್ದ ಬಗ್ಗೆ ಬೇರೆ ರಿಜಿಸ್ಟರ್ ನಲ್ಲಿ ನಮೂದು ಮಾಡಿದ ಬಗ್ಗೆ ಗೊತ್ತಿಲ್ಲ. ನಿ.ಪಿ-*88* ರಲ್ಲಿ ಕಾಲೇಜಿನ ಸೀಲ್ ಇಲ್ಲ ಎಂದರೆ ಸಾಕ್ಷಿದಾರರು ನಿ.ಪಿ-*88* ಅರ್ಜಿಯಲ್ಲಿ ಕಾಣುವ ಸೀಲುಗಳು ಕಾಲೇಜಿನ ಸೀಲುಗಳು ಇರುತ್ತವೆ ಎಂದು ಸಾಕ್ಷಿದಾರರು ನುಡಿಯುತ್ತಾರೆ. ನಿ.ಪಿ-*89* ರಲ್ಲಿ ಕಾಲೇಜಿನ ಪ್ರಾಂಶುಪಾಲರು ಸಹಿ ಮಾಡಿರಬಹುದು. ನಿ.ಪಿ-*89* ರಂತೆ ಮಹಜರ್ ಅನ್ನು ಕಾಲೇಜಿನಲ್ಲಿ ಮಾಡಿಲ್ಲ ಮತ್ತು ಪೋಲೀಸ್ ಠಾಣೆಯಲ್ಲಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಾನು ಮತ್ತು ಚಾ.ಸಾ-*36* ಮಹಜರ್ ನ ಅಂಶಗಳನ್ನು ಹೇಳಿ ಬರೆಸಿಲ್ಲ ಎಂದರೆ ಸರಿ. ನಿ.ಪಿ-*86* ಮಹಜರ್ ಕಾಲದಲ್ಲಿ ಪೋಟೋಗಳನ್ನು ತೆಗೆದಿದ್ದಾರೆ. ನಿ.ಪಿ-*83, 84, 85* ರಂತೆ ಪೋಟೋಗಳನ್ನು

ಪೋಟೋಗ್ರಾಫರ್ ತೆಗೆದಿದ್ದಾರೆ. ನಿ.ಪಿ-*86* ಮಹಜರ್ ನಲ್ಲಿ ಪೋಟೋಗ್ರಾಫರ್ ಸಹಿ ಮಾಡಿದ ಬಗ್ಗೆ ಗೊತ್ತಿಲ್ಲ. ಕ್ಯಾಮಾರಾ ಬಗ್ಗೆ ಮಾಹಿತಿ ಇಲ್ಲ. ನಾನು ಹೇಳಿದಂತೆ ಸ್ಥಳಕ್ಕೆ ಹೋಗಿಲ್ಲ ಮತ್ತು ದಾಖಲೆಗಳನ್ನು ಹಾಗೂ ಪೋಟೋಗಳನ್ನು ಪೋಲೀಸ್ ಠಾಣೆಯಲ್ಲಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಅದೇ ಕಾರಣ ಸಾರ್ವಜನಿಕ ವ್ಯಕ್ತಿಗಳನ್ನು ಮಹಜರ್ ಗೆ ಕರೆದಿಲ್ಲ ಮತ್ತು ಇಲಾಖಾ ವಿಚಾರಣೆ ಭಯದಿಂದ ನಮ್ಮನ್ನು ಕರೆಸಿ ಸಹಿಗಳನ್ನು ಪೋಲೀಸ್ ಠಾಣೆಯಲ್ಲಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಆರೋಪಿಗಳು ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ ಮತ್ತು ಯಾವುದೇ ವಸ್ತುಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತದಲ್ಲಿ ಸತ್ತ ವ್ಯಕ್ತಿಯ ಪ್ರಕರಣಕ್ಕೆ ಸಂಬಂಧ ಪಟ್ಟಂತೆ ನನ್ನ ಸಹಿಗಳನ್ನು ಮತ್ತು ನನ್ನ ಹೇಳಿಕೆಯನ್ನು ಪಡೆಯಲಾಗಿದೆ ಎಂದರೆ ಸರಿಯಲ್ಲ.

*3* ರಿಂದ *12* ನೇ ಆರೋಪಿಗಳ ಪರ ವಕೀಲರು ಈ ಮೇಲಿನಂತೆ ಪಾಟೀ ಸವಾಲನ್ನು ಅಳವಡಿಸಿಕೊಂಡಿದ್ದಾರೆ.

*ಮರು ವಿಚಾರಣೆ:- ಇಲ್ಲ.*

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*23.03.2022*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*